**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ: 645/2023**

**ಸಾಕ್ಷಿಯನ್ನು ದಿಃ 10.06.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಹೆಚ್.ಎನ್ ಕುಮಾರ್ | ಸಿಡಬ್ಲ್ಯೂ: 2 | ಪಿಡಬ್ಲ್ಯೂ: 2 |
| ತಂದೆಯ ಹೆಸರು | ಲೇಟ್ ನಂಜುಂಡಯ್ಯ | | |
| ವಯಸ್ಸು | 52 ವರ್ಷ | | |
| ಕೆಲಸ | ವ್ಯಾಪಾರ | | |
| ವಾಸಸ್ಥಳ | ಮಾರಿಗುಡಿ ಬೀದಿ, ಹುಣಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾ-1 ಗೊತ್ತಿಲ್ಲ. ಚಾಸಾ-3 ರಿಂದ 5 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತಿಲ್ಲ. ಮೃತ ಹೆಚ್.ವಿ ಮಂಜುನಾಥ ನನ್ನ ಅಣ್ಣನ ಮಗ. ಸಾಕ್ಷಿ ದೂರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-1 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದಿಃ 05.09.2023 ರಂದು ಸಂಜೆ 7-00 ಗಂಟೆಗೆ ನಾನು ಅಂಗಡಿಯಲ್ಲಿದ್ದಾಗ, ಚಾಸಾ-4 ರವರು ದೂರವಾಣಿ ಕರೆ ಮಾಡಿ, ನನ್ನ ಅಣ್ಣನ ಮಗನಾದ ಹೆಚ್.ವಿ ಮಂಜುನಾಥ ರವರಿಗೆ ನ್ಯಾಯಾಲಯದ ಮುಂದೆ ರಸ್ತೆಯಲ್ಲಿ ಅಪಘಾತವಾಗಿದೆ ಎಂದು ತಿಳಿಸಿದರು. ನಾನು ತಕ್ಷಣ ಸ್ಥಳಕ್ಕೆ ಬಂದು ನೋಡಿದಾಗ ನನ್ನ ಅಣ್ಣನ ಮಗ ಮಂಜುನಾಥ ಮತ್ತು ಚಾಸಾ-3 ರವರು ಅಪಘಾತವಾಗಿ ಕೆಳಗೆ ಬಿದಿದ್ದರು. ನಾವೆಲ್ಲರೂ ಸೇರಿ ಅವರಿಬ್ಬರನ್ನು ಹುಣಸೂರು ಕಾವೇರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಚಾಸಾ.3 ರವರನ್ನು ಹುಣಸೂರು ಸರಿಕಾರಿ ಆಸ್ಪತ್ರೆಗೆ ಸೇರಿಸಿದೆವು. ನನ್ನ ಅಣ್ಣನ ಮಗ ಮಂಜುನಾಥನನ್ನು ಕಾವೇರಿ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆ ಗಾಗಿ ಮೈಸೂರಿನ ಕೆವಿಸಿ ಆಸ್ಪತ್ರೆಗೆ ಸೇರಿಸಿದೆವು. ಚಾಸಾ-3 ರವರನ್ನು ಮೈಸೂರಿನ ಮಿಷನ್ ಆಸ್ಪತ್ರೆಗೆ ದಾಖಲಿಸಿದೆವು. ದಿಃ 07.09.2023 ರಂದು ಬೆಳಗಿನ ಜಾವ ಮಂಜುನಾಥ ಚಿಕಿತ್ಸೆ ಫಲಕಾರಿಯಾಗದೇ ಆಸ್ಪತ್ರೆಯಲ್ಲಿ ಮೃತ ಪಟ್ಟರು. ಈ ಬಗ್ಗೆ ನಾನು ದೂರನ್ನು ನೀಡಿದ್ದೇನೆ. ಮೃತ ಮಂಜುನಾಥ,

KA-45-EC-6673ರ ಬೈಕ್‌ನಲ್ಲಿ ಚಾಸಾ-3 ರವರನ್ನು ಕೂರಿಸಿಕೊಂಡು ಮೈಸೂರು ಕಡೆಯಿಂದ ಹುಣಸೂರು ಕಡೆಗೆ ಬರುತ್ತಿದ್ದರು. KA-09-MA-7212 ರ ಪೋಲೋ ಕಾರಿನಿಂದ ಅಪಘಾತವಾಯಿತು. ಸದರಿ ವಾಹನದ ಚಾಲಕ ಮಡಿಕೇರಿ ಕಡೆಯಿಂದ ಮೈಸೂರು ಕಡೆಗೆ ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ಬಂದು ನನ್ನ ಅಣ್ಣನ ಮಗ ಚಲಾಯಿಸುತ್ತಿದ್ದ ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ಅಪಘಾತವಾಯಿತು. ಈ ವಿಷಯವನ್ನು ನನಗೆ ಚಾಸಾ-4 ರವರು ತಿಳಿಸಿದರು. ಮಂಜುನಾಥ ತೀರಿಕೊಂಡ ನಂತರ ನಾನು ನಿಪಿ-1 ರ ದೂರನ್ನು ನೀಡಿದ್ದೇನೆ. ನನ್ನ ಅಣ್ಣನ ಮಗನ ಬೈಕ್ ಮತ್ತು ಅಪಘಾತಪಡಿಸಿದ ಕಾರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ 4 ಭಾವ ಚಿತ್ರಗಳಲ್ಲಿ ಕಾರನ್ನು ಮತ್ತು 4 ಭಾವ ಚಿತ್ರಗಳಲ್ಲಿ ಬೈಕನ್ನು ನೋಡಿ ಗುರುತಿಸಿದ್ದು, ಸದರಿ ಭಾವ ಚಿತ್ರಗಳನ್ನು ನಿಪಿ-2 ರಿಂದ 9 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀ. ಎಸ್.ಎನ್.ಕೆ. ವಕೀಲರಿಂದ:**

ನಾನು ದಿ: 07.09.2023 ರಂದು ದೂರನ್ನು ಕೊಟ್ಟಿದ್ದೇನೆ. ಅದಕ್ಕೂ ಮೊದಲು ನಾನು ಠಾಣೆಗೆ ಹೋಗಿ ಯಾವುದೇ ದೂರನ್ನು ನೀಡಿಲ್ಲ. ನಾನು ದೂರು ನೀಡುವ ಪೂರ್ವದಲ್ಲಿ ಅಪಘಾತಕ್ಕೆ ಸಂಬಂಧಪಟ್ಟಂತೆ ಬೇರೆ ಯಾರಾದರೂ ದುೂರು ನೀಡಿದ್ದಾರೆಯೇ ಎಂದು ನಾನು ತಿಳಿದುಕೊಂಡಿಲ್ಲ. ನನ್ನ ಅಣ್ಣನ ಮಗ ತೀರಿಕೊಂಡ ನಂತರ ನಾನು ಠಾಣೆಗೆ ಹೋಗಿ ಬೆಳಿಗ್ಗೆ 9 ರಿಂದ 10 ಗಂಟೆಯ ಸಮಯದಲ್ಲಿ ದೂರನ್ನು ಕೊಟ್ಟಿದ್ದೇನೆ. ನಾನು ದೂರು ನೀಡುವ ಪೂರ್ವದಲ್ಲಿ ದಿ: 05.09.2023 ರಂದು ಚಾಸಾ-1 ರವರು ದೂರನ್ನು ನೀಡಿ ಅಪಘಾತ ನನ್ನ ಅಣ್ಣನ ಮಗನ ಅತೀವೇಗ ಮತ್ತು ಅಜಾಗರೂಕತೆಯ ಚಾಲನೆಯಿಂದ ಆಗಿದೆ ಎಂದು ಹೇಳಿದ್ದರು ಎಂದರೆ ಗೊತ್ತಿಲ್ಲ. ಸದರಿ ದೂರಿನ ಪ್ರಕಾರ ನನ್ನ ಅಣ್ಣನ ಮಗನ ವಿರುದ್ಧ ಪ್ರಕರಣ ದಾಖಲಾಗಿತ್ತು ಎಂದರೆ ದೂರು ಕೊಟ್ಟಿರಬಹುದು. ನನ್ನ ಅಣ್ಣನ ಮಗನ ತಪ್ಪಿನಿಂದ ಅಪಘಾತವಾಗಿ ಚಾಸಾ-1 ರವರು ಆ ಬಗ್ಗೆ ದೂರನ್ನು ನೀಡಿ ಪ್ರಕರಣ ದಾಖಲಾದ ವಿಚಾರ ನನಗೆ ಗೊತ್ತಿದ್ದರೂ ಸಹ ನಿಪಿ-1ರ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ: 05-09-2023 ರಂದು ದೂರು ಕೊಟ್ಟ ವಿಚಾರ ನನಗೆ ಸಂಪೂರ್ಣವಾಗಿ ಗೊತ್ತಿದ್ದರೂ ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾಸಾ–1 ರವರು ನೀಡಿದ ದೂರಿನ ಪ್ರಕಾರ ನನ್ನ ಅಣ್ಣನ ಮಗನ ತಪ್ಪಿನಿಂದ ಅಪಘಾತವಾಗಿದೆ ಎಂದು ಪ್ರಕರಣ ದಾಖಲಾಗಿದೆ ಎಂದರೆ ಸುಳ್ಳು ದೂರನ್ನು ನೀಡಿದ್ದಾರೆ. ಚಾಸಾ–1 ರವರು ನೀಡಿದ ದೂರಿನ ಪ್ರಕಾರ ಅಪಘಾತವು ನನ್ನ ಅಣ್ಣನ ಮಗನಾದ ಮೃತ ಮಂಜುನಾಥನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ.

ನಾನು ದೂರು ನೀಡುವ ಸಮಯದಲ್ಲಿ ಚಾಸಾ–1 ರವರು ಮೊದಲೇ ದೂರನ್ನು ದಾಖಲಿಸಿದ್ದಾರೆ ಎಂದು ಪೊಲೀಸರು ಮಾಹಿತಿಯನ್ನು ನೀಡಲಿಲ್ಲ. ಮಂಜುನಾಥರವರು ಮೃತಪಟ್ಟಿರುವ ಕಾರಣ ಪರಿಹಾರಕ್ಕೆ ಅನುಕೂಲವಾಗಲೀ ಎಂದು ಪೋಲಿಸರೊಂದಿಗೆ ಶಾಮಿಲಾಗಿ ನಿಪಿ–1 ರ ಸುಳ್ಳು ದೂರನ್ನು ನಾನು ನೀಡಿದ್ದೇನೆ ಎಂದರೆ ಸರಿಯಲ್ಲ. ನಿಪಿ–1 ರಲ್ಲಿ ಬರೆದ ವಿಷಯಗಳು ನನಗೆ ಸಂಪೂರ್ಣವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಯಾರದ್ದೋ ಚಿತಾವಣೆಯ ಮೇರೆಗೆ ನಿಪಿ–1 ರ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನಿಪಿ–1 ರಲ್ಲಿ ಬರೆದ ವಿಷಯಗಳೆಲ್ಲಾ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಚಾಸಾ–1 ರವರು ನೀಡಿದ ದೂರು ಸರಿಯಾಗಿದೆ ಎಂದರೆ ಸರಿಯಲ್ಲ. ಅಪಘಾತವು ನನ್ನ ಅಣ್ಣನ ಮಗನ ಅತೀವೇಗ ಮತ್ತು ಅಜಾಗರೂಕತೆಯ ಚಾಲನೆಯಿಂದ ಆಗಿದೆ ಎಂದರೆ ಸರಿಯಲ್ಲ. ಅಪಘಾತಕ್ಕೆ ಸಂಬಂಧಿಸಿದಂತೆ ಪರಿಹಾರ ಪಡೆಯಬೇಕೆಂಬ ದುರುದ್ದೇಶದಿಂದ ನಿಪಿ–1 ರ ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಕಾಲಾವಕಾಶ ಕೇಳಿದ್ದು, ಸಕಾರಣ ಇಲ್ಲದಿರುವುದರಿಂದ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

**<u>ಪಾಟೀಸವಾಲುಃ</u> ಆರೋಪಿ ಪರ ವಕೀಲರು ಇಲ್ಲವೆಂದಿದ್ದಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.